Reg. No. | | | | | | | | | |

# BASKAC 281

## Choice Based Credit System IV Semester B.A. Degree Examination, September 2022
## (2020 – 21 and Earlier Batches)
## KANNADA OPTIONAL
### ಪತ್ರಿಕೆ – IV : ಕಾವ್ಯ , ಸಾಹಿತ್ಯ ಚರಿತ್ರೆ ಮತ್ತು ಛಂದಸ್ಸು

Time : 3Hours Max. Marks : 120

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×15=45)**

1) ಪರಂಪರಾಗತ ಆಚರಣೆಗಳ ವಿಡಂಬನೆಯು ಕಾಯ ಭಾಗದಲ್ಲಿ ವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

**ಅಥವಾ**

ನೀಲಯ್ಯನು ಸಂಕಮ್ಮನಲ್ಲಿ ಭಾಷೆಯನ್ನು ಕೊಡು ಎಂದು ಹೇಳಲು ಕಾರಣವೇನು ? ಅದರ ಪರಿಣಾಮವನ್ನು ವಿವರಿಸಿರಿ.

2) ದೇಹವೇ ದೇಗುಲವೆಂಬ ಪರಿಕಲ್ಪನೆಯು ವಚನಕಾರರಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

**ಅಥವಾ**

ಪಂಪ ಮತ್ತು ಬಿ.ಎಂ.ಶ್ರೀ . ಅವರ ರಚನೆಗಳಲ್ಲಿ ಪ್ರೀತಿಯ ಸಂವೇದನೆ ದುರಂತಕ್ಕೆ ಕಾರಣವಾದ ಬಗೆಯನ್ನು ವಿವರಿಸಿರಿ.

3) ಸಾಂಗತ್ಯ ಸಾಹಿತ್ಯಕ್ಕೆ ರತ್ನಾಕರವರ್ಣಿ ಮತ್ತು ನಂಜುಂಡ ಕವಿಯ ಕೊಡುಗೆಗಳೇನು ? ವಿವರಿಸಿರಿ.

**ಅಥವಾ**

ದಾಸ ಸಾಹಿತ್ಯದ ಸ್ವರೂಪ ಮತ್ತು ಆಶಯಗಳೇನು ? ವಿವರಿಸಿರಿ.

II. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×10=10)**

1) ತ್ರಿಪದಿ ಎಂದರೇನು ? ಅದರ ಲಕ್ಷಣಗಳು ಮತ್ತು ಪ್ರಾಚೀನತೆಯನ್ನು ವಿವರಿಸಿರಿ.

2) ಷಟ್ಪದಿ ಎಂದರೇನು ? ಮಾತ್ರಾ ಷಟ್ಪದಿಯ ವಿಧಗಳನ್ನು ಉಲ್ಲೇಖಿಸಿ ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳನ್ನು ವಿವರಿಸಿರಿ.

ಆ) **ಒಂದು** ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ ಗಣ ವಿಭಜಿಸಿ ಛಂದಸ್ಸನ್ನು ಗುರುತಿಸಿರಿ. **(1×5=5)**

1) ಸರದಾರ ಬರುವಾಗ ಸುರಿದಾವ ಮಲ್ಲಿಗೆ.

2) ಅರಸುಗಳಿಗಿದು ವೀರ ದ್ವಿಜರಿಗೆ.

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಅಜ್ಞಾತ ತತ್ವ ಪದಕಾರನು ಸಮಾಜಕ್ಕೆ ನೀಡುವ ಸಂದೇಶವೇನು ? ವಿವರಿಸಿರಿ.

**ಅಥವಾ**

ಮಕ್ಕಳನ್ನು ಕಳೆದುಕೊಂಡ ಗಾಂಧಾರಿಯ ದುಃಖವನ್ನು ವಿವರಿಸಿರಿ.

2) ತತ್ವಪದಗಳಲ್ಲಿ ಕಂಡುಬರುವ ತಾತ್ವಿಕ ಅಂಶಗಳಾವುವು ?

**ಅಥವಾ**

ಸಾಂಗತ್ಯ ಸಾಹಿತ್ಯದ ಉಗಮ ಮತ್ತು ವಿಕಾಸವನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

3) ಸಾಂಗತ್ಯ ಛಂದಸ್ಸಿನ ಲಕ್ಷಣಗಳನ್ನು ಉದಾಹರಣೆ ಸಹಿತ ವಿವರಿಸಿರಿ.

**ಅಥವಾ**

ಅಂಶ ಷಟ್ಪದಿಯ ಸ್ವರೂಪವನ್ನು ಉದಾಹರಣೆ ಸಹಿತ ವಿವರಿಸಿರಿ.

IV. ಅ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಆಯ್ದಕ್ಕಿ ಮಾರಯ್ಯ.

2) ದೇಹ ಮತ್ತು ಕದಳಿಯ ಸಂಬಂಧ.

3) ವಚನಗಳಲ್ಲಿ ಕಾಯಕದ ಮಹತ್ವ.

4) ಚಂಡಿಯ ಸ್ವಭಾವ.

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಪುಲಿಗೆರೆಯ ಸೋಮನಾಥ.

2) ಸಂಚಿಯ ಹೊನ್ನಮ್ಮ.

3) ಪ್ರಮುಖ ತತ್ವಪದಕಾರರು.

4) ಕನಕದಾಸರು.

ಇ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಬಾದಾಮಿ ಶಾಸನ.

2) ತ್ರಿಪದಿಯ ಪ್ರಭೇದಗಳು.

3) ಷಟ್ಪದಿಯ ಸಂಕ್ಷಿಪ್ತ ಚರಿತ್ರೆ.

4) ಭೋಗ ಷಟ್ಪದಿ.

V. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(12×1=12)**

1) ''ಕಾರಿ ಹೆಗ್ಗಡೆಯ ಮಗಳು'' ಕವನವನ್ನು ಬರೆದವರಾರು ?

2) ಮಾದಾರ ಚೆನ್ನಯ್ಯನ ರಗಳೆ ಕೃತಿಯನ್ನು ಬರೆದ ಕವಿ ಯಾರು ?

3) ಮಾರೇಶ್ವರ ಎಂಬುದು ಯಾರ ಅಂಕಿತ ನಾಮ ?

4) ಚಂಡಿಯು ಶ್ರಾದ್ಧದ ಪಿಂಡಗಳನ್ನು ಏನು ಮಾಡಿದಳು ?

5) ವ್ಯಾಸರಾಯರ ಕೀರ್ತನೆಗಳ ಅಂಕಿತನಾಮವೇನು ?

6) ಉದ್ದಾಲಕನ ಕಥೆಯನ್ನು ಸಾಂಗತ್ಯದಲ್ಲಿ ಬರೆದ ಕವಿ ಯಾರು ?

7) ತ್ರಿಲೋಕ ಶತಕ ಕೃತಿಯ ಕರ್ತೃ ಯಾರು ?

8) ತತ್ವಪದಗಳನ್ನು ಹಾಡಲು ಬಳಸುವ ವಾದ್ಯ ಯಾವುದು ?

9) ವಿಷ್ಣುಗಣವು ಅಧಿಕವಾಗಿರುವ ಛಂದಸ್ಸು ಯಾವುದು ?

10) ಮೂಲ ಷಟ್ಪದಿಯ ಮೊತ್ತ ಮೊದಲ ಪ್ರಯೋಗವು ಯಾವ ಕೃತಿಯಲ್ಲಿ ದೊರಕುತ್ತದೆ ?

11) ''ವರ್ಣಕ ಕವಿತೆ'' ಎಂದು ಹೆಸರಾಗಿರುವ ಛಂದಸ್ಸು ಯಾವುದು ?

12) ಕನಕದಾಸರ ''ರಾಮಧಾನ್ಯ ಚರಿತೆ'' ಯಾವ ಷಟ್ಪದಿಯಲ್ಲಿ ರಚಿತವಾಗಿದೆ ?